ಏನು ಮಾಡುವಿರಿ?

ಈ ವರ್ಷದಲ್ಲಿ ಯಾವುದಾದರೂ ನವೀನತೆಯನ್ನು ಮಾಡಿ ತೋರಿಸುತ್ತೀರಲ್ಲವೇ! ಹೊಸ ವರ್ಷವೆಂದು ಹೇಳುತ್ತೀರಿ ಅಂದಮೇಲೆ ನವೀನತೆಯನ್ನು ಮಾಡುತ್ತೀರಲ್ಲವೇ! ಈಗ ಬೇಹದ್ದಿನ ವೈರಾಗ್ಯದ ಮುಕ್ತಿಧಾಮಕ್ಕೆ ಹೋಗುವ ಕೀಲಿಕೈಯನ್ನು ತಯಾರಿ ಮಾಡಿಕೊಳ್ಳಿ. ತಾವೆಲ್ಲರೂ ಸಹ ಮೊದಲು ಮುಕ್ತಿಧಾಮಕ್ಕೆ ಹೋಗಬೇಕಾಗಿದೆಯಲ್ಲವೇ! ಬ್ರಹ್ಮಾತಂದೆಯೊಂದಿಗೆ ಪ್ರತಿಜ್ಞೆ ಮಾಡಿದ್ದೀರಿ – ಜೊತೆಯಲ್ಲಿಯೇ ನಡೆಯುತ್ತೇವೆ, ಜೊತೆಯಲ್ಲಿಯೇ ಬರುತ್ತೇವೆ, ಜೊತೆಯಲ್ಲಿಯೇ ರಾಜ್ಯ ಮಾಡುತ್ತೇವೆ, ಜೊತೆಯಲ್ಲಿಯೇ ಭಕ್ತಿ ಮಾಡುತ್ತೇವೆ ಅಂದಮೇಲೆ ಈಗ ತಯಾರಿ ಮಾಡಿಕೊಳ್ಳಿ, ಈ ವರ್ಷದಲ್ಲಿ ಮಾಡುತ್ತೀರಾ ಅಥವಾ ಇನ್ನೊಂದು ವರ್ಷವು ಬೇಕಾ? ಈ ವರ್ಷದಲ್ಲಿ ಮಾಡಿಯೇ ಮಾಡುತ್ತೇವೆ ಎಂದು ಯಾರು ತಿಳಿಯುವಿರೋ ಅವರು ಕೈ ಎತ್ತಿರಿ. ಮಾಡುತ್ತೀರಾ? ಮಾಡಿದ್ದೇ ಅದರೆ ಅಡ್ವಾನ್ಸ್ ಪಾರ್ಟಿಯವರು ತಮಗೆ ಬಹಳ ಶುಭಾಶಯಗಳನ್ನು ಹೇಳುವರು, ಅವರೂ ಸಹ ದಣಿದಿದ್ದಾರೆ. ಒಳ್ಳೆಯದು, ಶಿಕ್ಷಕಿ ಸಹೋದರಿಯರು ಏನು ಹೇಳುತ್ತೀರಿ? ಮೊದಲನೇ ಸಾಲಿನವರು ಏನು ಹೇಳುತ್ತೀರಿ? ಮೊದಲನೇ ಸಾಲಿನ ಪಾಂಡವರು ಮತ್ತು ಶಕ್ತಿಯರು, ಯಾರು ಮಾಡುವಿರೋ ಮೊದಲು ಕೈ ಎತ್ತಿರಿ. ಅರ್ಧ ಅಲ್ಲ. ಅರ್ಧ ಎತ್ತುತ್ತೀರೆಂದರೆ ಅರ್ಧ ಮಾಡುತ್ತೀರಿ ಎಂದು ಹೇಳುತ್ತೇವೆ, ಆದ್ದರಿಂದ ಉದ್ದನೆಯದಾಗಿ ಕೈಯನ್ನು ಎತ್ತಿರಿ. ಒಳ್ಳೆಯದು. ಶುಭಾಶಯಗಳು, ಶುಭಾಶಯಗಳು. ಡಬಲ್ ವಿದೇಶಿಗಳಿಂದಲೂ ಕೈಯನ್ನು ಎತ್ತಿಸುತ್ತೇವೆ. ಡಬಲ್ ವಿದೇಶಿಯರೇ ಪರಸ್ಪರ ಯಾರು ಎತ್ತಿಲ್ಲವೋ ನೋಡಿಕೊಳ್ಳಿ. ಒಳ್ಳೆಯದು. ಈ ಸಿಂಧಿ ಗ್ರೂಪಿನವರೂ ಸಹ ಕೈಯನ್ನು ಎತ್ತುತ್ತಿದ್ದಾರೆ, ಚಮತ್ಕಾರವಾಗಿದೆ. ಸಿಂಧಿ ಗ್ರೂಪಿನವರೂ ಸಹ ಮಾಡುತ್ತೀರಾ? ಅಂದಾಗ ಡಬಲ್ ಶುಭಾಶಯಗಳು ಬಹಳ ಒಳ್ಳೆಯದು. ಪರಸ್ಪರ ಒಬ್ಬರು ಇನ್ನೊಬ್ಬರಿಗೆ ಜೊತೆಯನ್ನು ಕೊಡುತ್ತಾ, ಶುಭಭಾವನೆ ಇಡುತ್ತಾ ಜೊತೆಯಲ್ಲಿ ಕೈಯಲ್ಲಿ ಕೈ ಕೊಡುತ್ತಾ ಮಾಡಲೇಬೇಕಾಗಿದೆ. ಒಳ್ಳೆಯದು. (ಸಭೆಯಲ್ಲಿ ಯಾರದೋ ಶಬ್ದವು ಕೇಳಿ ಬಂದಿತು) ಎಲ್ಲರೂ ಕುಳಿತುಕೊಳ್ಳಿ, ಇದು ಹೊಸದೇನಲ್ಲ (ನಥಿಂಗ್ ನ್ಯೂ).

ಈಗೀಗ ಸೆಕೆಂಡಿನಲ್ಲಿ ಬಿಂದು ಆಗಿ ಬಿಂದು ತಂದೆಯನ್ನು ನೆನಪು ಮಾಡಿ ಮತ್ಯಾವುದೇ ಮಾತುಗಳಿದ್ದರೂ ಸಹ ಅದಕ್ಕೆ ಬಿಂದುವನ್ನಿಡಿ, ಬಿಂದುವನ್ನಿಡಲು ಆಗುತ್ತದೆಯೇ? ಕೇವಲ ಒಂದು ಸೆಕೆಂಡಿನಲ್ಲಿ ನಾನು ತಂದೆಯವನು, ತಂದೆಯು ನನ್ನವರು. ಒಳ್ಳೆಯದು.

ನಾಲ್ಕಾರೂ ಕಡೆಯ ಸರ್ವಹೊಸ ಯುಗದ ಮಾಲೀಕ ಮಕ್ಕಳಿಗೆ, ನಾಲ್ಕಾರೂ ಕಡೆ ಹೊಸ ವರ್ಷವನ್ನು ಆಚರಿಸುವ ಒಲವು-ಉತ್ಸಾಹದಲ್ಲಿರುವಂತಹ ಮಕ್ಕಳಿಗೆ, ಸದಾ ಹಾರುತ್ತಾ ಇರಬೇಕು ಮತ್ತು ಹಾರಿಸುತ್ತಾ ಇರಬೇಕು - ಇಂತಹ ಹಾರುವಕಲೆಯುಳ್ಳಂತಹ ಮಕ್ಕಳಿಗೆ ಸದಾ ತೀವ್ರಪುರುಷಾರ್ಥದ ಮೂಲಕ ವಿಜಯಮಾಲೆಯ ಮಣಿಗಳಾಗುವಂತಹ ವಿಜಯೀರತ್ನಗಳಿಗೆ ಬಾಪ್ದಾದಾರವರ ಹೊಸವರ್ಷ ಹಾಗೂ ಹೊಸಯುಗದ ಆಶೀರ್ವಾದಗಳ ಜೊತೆಜೊತೆ ಪದಮಗುಣದಷ್ಟು ಶುಭಾಷಯಗಳು-ಶುಭಾಷಯಗಳನ್ನು ತುಂಬಿದ ತಟ್ಟೆಯನ್ನು ಕೊಡುತ್ತಿದ್ದೇವೆ. ಒಂದು ಕೈಯಿಂದ ಚಪ್ಪಾಳೆ ತಟ್ಟಿ. ಒಳ್ಳೆಯದು.

ವರದಾನ: ವರದಾನ: ಏಕಾಗ್ರತೆಯ ಅಭ್ಯಾಸದ ಮೂಲಕ ಏಕರಸದ ಸ್ಥಿತಿಯ ಅನುಭವ ಮಾಡುವಂತಹ ಸರ್ವ ಸಿ-ಸ್ವರೂಪ ಭವ

ಎಲ್ಲಿ ಏಕಾಗ್ರತೆಯಿರುತ್ತದೆ ಅಲ್ಲಿ ಸ್ವತಃವಾಗಿ ಏಕರಸ ಸ್ಥಿತಿ ಇರುತ್ತದೆ. ಏಕಾಗ್ರತೆಯಿಂದ ಸಂಕಲ್ಪ, ಮಾತು ಮತ್ತು ಕರ್ಮದ ವ್ಯರ್ಥತನ ಸಮಾಪ್ತಿಯಾಗಿಬಿಡುತ್ತದೆ ಮತ್ತು ಸಮರ್ಥತನ ಬಂದುಬಿಡುತ್ತದೆ. ಏಕಾಗ್ರತ ಅರ್ಥಾತ್ ಒಂದೇ ಶ್ರೇÀ್ಠ ಸಂಕಲ್ಪದಲ್ಲಿ ಸ್ಥಿತರಾಗುವುದು. ಹೇಗೆ ಒಂದು ರೂಪಿ ಸಂಕಲ್ಪದಲ್ಲಿ ಇಡೀ ವೃಕ್ಷರೂಪಿ ವಿಸ್ತಾರ ಸಮಾವೇಶವಾಗಿರುತ್ತದೆ. ಏಕಾಗ್ರತೆಯನ್ನು ಹೆಚ್ಚಿಸಿಕೊಳ್ಳಿ ಆಗ ಸರ್ವ ಪ್ರಕಾರದ ಹಲ್ಚಲ್ ಸಮಾಪ್ತಿಯಾಗಿಬಿಡುತ್ತದೆ. ಎಲ್ಲಾ ಸಂಕಲ್ಪ, ಮಾತು ಮತ್ತು ಕರ್ಮ ಸಹಜವಾಗಿ ಸಿದ್ಧವಾಗಿಬಿಡುತ್ತದೆ. ಅದಕ್ಕಾಗಿ ಏಕಾಂತವಾಸಿಗಳಾಗಿ.

ಸ್ಲೋಗನ್: ಸ್ಲೋಗನ್: ಒಮ್ಮೆ ಮಾಡಿದ ತಪ್ಪನ್ನು ಪದೇ-ಪದೇ ಯೋಚಿಸುವುದು ಅರ್ಥಾತ್ ಕೊಳೆಯ ಮೇಲೆ ಕೊಳೆ ಮಾಡುತ್ತಿರುವುದು ಆದ್ದರಿಂದ ಕಳೆದುಹೋದದಕ್ಕೆ ಬಿಂದು ಹಾಕಿಬಿಡಿ.

ಅವ್ಯಕ್ತ ಸೂಚನೆ: ಕಂಬೈಂಡ್ ರೂಪದ ಸ್ಮೃತಿಯಿಂದ ಸದಾ ವಿಜಯಿಯಾಗಿರಿ

ಹೇಗೆ ಈ ಸಮಯ ಆತ್ಮ ಮತ್ತು ಶರೀರ ಕಂಬೈಂಡ್ ಆಗಿದೆ, ಹಾಗೆಯೇ ತಂದೆ ಮತ್ತು ನೀವು ಕಂಬೈಂಡ್ ಆಗಿರಿ. ಕೇವಲ ಇದನ್ನು ನೆನಪಿಟ್ಟುಕೊಳ್ಳಿ ‘ನನ್ನ ಬಾಬಾ’. ತಮ್ಮ ಮಸ್ತಕದಲ್ಲಿ ಸದಾ ಜೊತೆಯ ತಿಲಕವಿಟ್ಟುಕೊಳ್ಳಿ. ಯಾರು ಸುಮಂಗಲಿಯಾಗಿರುತ್ತಾರೆ, ಜೊತೆಯಾಗಿರುತ್ತಾರೆ ಅವರು ಎಂದೂ ಮರೆಯುವುದಿಲ್ಲ. ಜೊತೆಗಾರರನ್ನು ಸದಾ ಜೊತೆ ಇಟ್ಟುಕೊಳ್ಳಿರಿ. ಒಂದುವೇಳೆ ಜೊತೆಯಿದ್ದರೆ ಜೊತೆ ಹೋಗುವರು. ಜೊತೆಯಿರಬೇಕು, ಜೊತೆ ಹೋಗಬೇಕು, ಪ್ರತಿ ಸೆಕೆಂಡ್, ಪ್ರತಿ ಸಂಕಲ್ಪದಲ್ಲಿ ಜೊತೆಯಿದ್ದೇ

